ಮಾಗಿ ಚಳೀಲಿ ಬೆಚ್ಚಗೆ ಹೊದ್ದು ಮಲಗಿದ್ದೋನ್ಗೆ ಥಟ್ಟನೆ ಎಚ್ಚರವಾಯ್ತು. ಮೊಬೈಲ್ ಹೊಡ್ಕೋತಿತ್ತು. ಟೈಮ್ ನೋಡ್ದೆ ಇನ್ನೂ ಬೆಳಗ್ಗೆ ಐದೂವರೆ. ಮನಸ್ಸಿಗೆ ಬಂದ ಮೊದಲ ಭಾವ 'ಯಾರೋ ಹೋದ್ರು' ಅನ್ನಿಸಿದ್ದು ಸತ್ಯಾನೇ. ದೊಡ್ಡಪ್ಪನ ಸೊಸೆ ಫೋನ್ ಮಾಡಿ ಅಂದ್ಲು..

'ಅಪ್ಪ ಹೋದ್ರು'

'ನೂರಾಗಿತ್ತಾ?'

'ಇನ್ನೊಂದು ಮೂರು ತಿಂಗಳು ಇದ್ದಿದ್ರಾಗ್ತಿತ್ತು'

'ಮಲಗಿ ಬಿಟ್ಟಿದ್ರು, ಮುಕ್ತಿ! ಬಿಡು !'

'ಹ್ಞೂಂ ಮುಕ್ತೀನೇ ! ಬರೀ ಅವರಿಗಲ್ಲ ! ನಮಗೂನೂ'

'ಎಷ್ಟೊತ್ತಿಗೆ'

'ಒಂಬತ್ತಕ್ಕೆ ಎತ್ತಿಬಿಡ್ತೀವಿ. ಬಹಳ ವರ್ಷ ಕಾಯಿಲೆಯಿಂದ ನರಳಿದ್ದು. ಈಗಾಗಲೇ ದೇಹ ಕೊಳೆತಿದೆ. ಆಗಲೇ ವಾಸನೆ'

'ಬಂದೆ'

ಎದ್ದೆ! ಹೊರಟೆ!

***

ಈ ದೊಡ್ಡಪ್ಪನಿಗೆ ನೂರರ ಆಸು ಪಾಸು. ಕಳೆದ ಇಪ್ಪತ್ತು ವರ್ಷದಿಂದ ಮಲಗೇ ಇದ್ರು. ಎಲ್ಲ ಹಾಸಿಗೇಲೆ. ಅದೇನೋ ಜ್ವರ ಅಂತ ಮೊದಲು ಮಲಗಿದ್ದು. ನಂತರ ಬಲಗಡೆ ಸ್ವಾಧೀನ ಹೋಯ್ತು. ನಿಧಾನವಾಗಿ ಮಾತು ಹೋಯ್ತು. ನಂತರ ಕಿವಿ. ಕೊನೆ ಕೊನೆಗೆ ಕಣ್ಣಿಗೆ ಕ್ಯಾನ್ಸರ್ ಬಂದು ಊದ್ಕೊಂಡಿತ್ತು. ಡಾಕ್ಟರ್ 'ವಯಸ್ಸಾಯ್ತು, ಟ್ರೀಟ್ಮೆಂಟ್ ಇನ್ನಾಗಲ್ಲ' ಎಂದಿದ್ರು. ಈಗ ಒಂದು ತಿಂಗಳ ಹಿಂದೆ ಗೆಡ್ಡೆ ಹೊಡೆದು, ಕಣ್ಣಿದ್ದ ಜಾಗದಲ್ಲಿ ಕೆಂಪು, ಬಿಳಿ, ಕಪ್ಪು ಮಿಶ್ರಿತ ರಕ್ತ ಮಾಂಸ ಕೀವುಗಳ ಮುದ್ದೆ ಇತ್ತು. ದುರದೃಷ್ಟ ಅಂದ್ರೆ ಇಷ್ಟೆಲ್ಲ ಆದ್ರೂನು, ಮನುಷ್ಯ ಜ್ಞಾನವಾಗೇ ಇದ್ದ. ಹಸಿವಿಗೆ, ನೋವಿಗೆ, ಉಚ್ಚೆಗೆ ಹೊಡ್ಕೋತಾ ಇದ್ದ. ಇದು ಸಾಲ್ದೂಂತ ಹೇಳಿ ಬೆಡ್ ಸೋರ್ ಆಗಿ ಚರ್ಮ ಬಳಿದಿತ್ತು. ದೇಹದ ಎಷ್ಟೊ ಕಡೆ ಚರ್ಮವೇ ಇರಲಿಲ್ಲ. ಯಾವುದರ ಮೇಲೆ ಮಲಗಿಸಿದ್ರೂ ಉರಿ. ಯಾವುದು ಹೊದ್ರೂ ಉರಿ.! ಎಳೇ ಬಾಳೆ ಎಲೆ ಹಾಸಿ ಅದರ ಮೇಲೆ ಮಲಗಿಸಿ, ಎಳೇ ಬಾಳೆ ಎಲೆ ಹೊದಿಸ್ತಿದ್ರು. ಎಲ್ಲಾ ನರಕನೂ ಇಲ್ಲೇ ಆಗಿ ಹೋಗಿತ್ತು. ಅಂತೂ ಹೋದ್ರು.!

***

ಮನೆ ಆಚೆ, ರಸ್ತೆಲಿ ಶಾಮಿಯಾನ ಹಾಕಿತ್ತು. ಅಲ್ಲೇ ನೆಲದಲ್ಲಿ ಹೆಣ ಮಲಗಿಸಿದ್ರು. ತಲೆ ಹತ್ತಿರ ಒಂದು ಕುರ್ಚಿ. ದೊಡ್ಡಮ್ಮ ಕೂತಿದ್ರು. ದೊಡ್ಡಪ್ಪನಿಗೆ ಹತ್ತು ಜನ ಹೆಣ್ಣು ಮಕ್ಕಳು. ಒಬ್ಬನೇ ಮಗ. ಹಾಗಾಗಿ ದೊಡ್ಡ ಸಂಸಾರ. ಜನ ಸೇರಿದ್ರು. ಅಲ್ಲಲ್ಲಿ ಕೂತು, ನಿಂತು, ಹೆಣ ಎತ್ತೋ ಪ್ರತೀಕ್ಷೆಲಿದ್ರು. ಮಗ ದೂರ ದಲ್ಲಿ ನಿಂತಿದ್ದ. ಮೊಬೈಲ್ ಫೋನಲ್ಲಿದ್ದ. ಅವನು ನಾನು ಒಂದೇ ವಯಸ್ಸು. ಅರವತ್ತು ದಾಟಿತ್ತು. ಹೆಣದ ಮುಖ ನೋಡಿದವನು ದೊಡ್ಡಮ್ಮನ ಹತ್ರ ಹೋಗಿ ಕೂತೆ. ಅವರಂದ್ರು ಒಂಟಿ ಮಾಡಿ ಹೋಗಿ ಬಿಟ್ರು ಮಹಾನುಭಾವರು. ನೂರರ ಹತ್ರ ಬಂದು ಹೋದ ದೊಡ್ಡಪ್ಪನ ಬಗ್ಗೆ ತೊಂಬತ್ತೈದರ ದೊಡ್ಡಮ್ಮ ಅಂದ ಮಾತು. ನೋಡಿದೆ ಅವರನ್ನೇ ದಿಟ್ಟಿಸ್ದೆ. ಕುತ್ತಿಗೇಲಿ ಆರು ಎಳೆ ಚಿನ್ನದ ಸರ. ಮಾಂಗಲ್ಯದ್ದು ಒಂದು ಬೇರೇನೇ ಹಗ್ಗದಷ್ಟು ದಪ್ಪದ ಸರವಿತ್ತು. ಕೈಯಲ್ಲಿ ಒಂಬತ್ತು ಜೊತೆ ಬಳೆ ಇತ್ತು. ಉಂಗುರಗಳ ಲೆಕ್ಕವಿರಲಿಲ್ಲ. ಹೆಣದ ಪಕ್ಕ ಕೂತಿದ್ರೂ ಒಡವೆ ಬಿಚ್ಚಬೇಕು ಅನ್ನಿಸಿರಲಿಲ್ಲ. ಮನಸ್ಸಿಗನ್ನಿಸಿದ್ದು,

'ಹೇಳಿದ್ರೆ ಕರಕೊಂಡು ಹೋಗಿರೋರು, ಆದ್ರೆ ಇವರು, ಅವರು ಕರೆದ್ರೆ ಹೋಗ್ತಿದ್ರಾ?'

ಅವರು ಕೈ ಹಿಡಿದು ಮತ್ತಂದ್ರು– 'ಬೆಳಗಿನ ಜಾವ ನಾಲ್ಕು ಗಂಟೆ ಕೈಹಿಡಿದು ಕೂತೇ ಇದ್ದೆ. ನನ್ನೇ ನೋಡ್ತಿದ್ರು. ಹರಿ ಹರೀ ಅಂದ್ರು. ಹೊರಟೋದ್ರು.'

ಮಗ ಹತ್ತಿರ ಬಂದೋನು, ಪಿಸುಗುಟ್ಟೋ ದನೀಲೇ ರೇಗ್ದ.

'ಸುಮ್ಮನಿರ್ತೀಯಾ! ಮಾತು ಹೋಗಿ ಹತ್ತು ವರ್ಷ ಆಗಿತ್ತು. ಗೊರ ಗೊರ ಅಂತಿದ್ರು ಹೋದ್ರು. ಹರೀನೂ ಇಲ್ಲ, ಗಿರೀನೂ ಇಲ್ಲ'

ಮೊಬೈಲಲ್ಲಿ ಮಾತಾಡ್ತಾ ದೂರ ಹೋದ. ದೊಡ್ಡಮ್ಮ ಮತ್ತಂದ್ರು.

'ಅವನಿಗೆ ಕೋಪ. ಇವ್ರು ವಿಲ್ ಬರೆದಿದ್ದಾರೆ. ಅವನಿಗೇನೂ ಕೊಟ್ಟಿಲ್ಲ. ಎಲ್ಲ ಮೊಮ್ಮಗನ ಹೆಸರಿಗೇ ಬರೆದಿದ್ದಾರೆ. ಇವನು ಅಯೋಗ್ಯ, ಇವನ ಪಾರುಪತ್ತೆಗೆ ಬಿಟ್ರೇ, ಆರು ತಿಂಗ್ಳಲ್ಲಿ ಎಲ್ಲಾ ಕಳೀತಾನೆ.'

ಇನ್ನಲ್ಲೇ ಕೂತ್ರೆ ಅವರೊಂದು ಮಾತು ನನ್ನ ಪ್ರತಿಕ್ರಿಯೆ, ಮತ್ತೆ ಅವರ ಮಗನ ಗುಡುಗಾಟದಲ್ಲಿ ಮಹಾಭಾರತ ವಾಗತ್ತೆ. ಹೆಣ ಎತ್ತಲ್ಲ ಅಂತ ಅನ್ನಿಸಿ, ಎದ್ದು ಮನೆ ಮೆಟ್ಟಿಲ ಮೇಲೆ ಕೂತೆ.

***

ಈ ದೊಡ್ಡಪ್ಪನ ಚರಿತ್ರೆ ಬಹಳ ಕಲರ್‌ಫುಲ್. ವರ್ಣರಂಜಿತ ವ್ಯಕ್ತಿ. ಹಾಸನದ ಹತ್ರ, ಒಂದು ಹತ್ತು ಕಿಲೋಮೀಟರ್ ದೂರ ನಮ್ಮ ಹಳ್ಳಿ. ನನ್ನ ಅಜ್ಜನ ಅಜ್ಜನೋ, ಅವನ ಅಜ್ಜನೋ, ರಾಮಾನುಜಾಚಾರ್ರ ಕಾಲ ಅಂದರೆ, ಒಂದು ಸಾವಿರ ವರ್ಷದ ಹಿಂದೆ ಅಲ್ಲಿ ಬಂದು ಸೆಟ್ಲಾಗಿದ್ದಂತೆ. ಎಂಟ್ಹತ್ತು ತಲೆಮಾರು ಗದ್ದೆ ತೋಟ ದೇವಸ್ಥಾನ ಪೂಜೆ ಪುನಸ್ಕಾರ ಅಂತ ನೆಮ್ಮದಿ ಯಾಗಿದ್ರು. ವ್ಯವಸಾಯದ ಜೊತೆಗೆ, ಅಜ್ಜನಿಗೆ ಶಾನುಭೋಗಿಕೆ, ಪೌರೋಹಿತ್ಯ ಎಲ್ಲಾ ಇತ್ತು. ಆ ಕಾಲಕ್ಕೆ ಅಲ್ಲಿ ಆಸುಪಾಸಿನಲ್ಲಿ ದೊಡ್ಡ ಕುಳ. ಅವರಿಗೆ ಹತ್ತು ಮಕ್ಕಳು. ಈ ದೊಡ್ಡಪ್ಪ ಆರನೇಯವರು. ಪ್ರೈಮರಿ ಸ್ಕೂಲು ಹಳ್ಳಿಯಲ್ಲೇ ಇತ್ತು. ಈ ಮನುಷ್ಯ ಅಷ್ಟೇ ಓದಿದ್ದು. ಮಿಡ್ಲಿಸ್ಕೂಲಿಗೆ ಹಾಸನಕ್ಕೆ ಸೇರಿಸಿದ್ದರಂತೆ, ಒಂದು ವರ್ಷ ಹೋದ. ಆಮೇಲೆ ಬಿಟ್ಟ. ಮೊದಲಿಂದ್ಲೂ ಕೈ ಸರಿ ಇರಲಿಲ್ಲ. ಕಳ್ಳತನದಲ್ಲಿ ಎತ್ತಿದ ಕೈ. ವರ್ಷದಿಂದ ವರ್ಷಕ್ಕೆ ಬೆಳೀತಿದ್ದ ಹಾಗೇ ಚಟಗಳೂ ಬೆಳೆದ್ವು. ಅಭ್ಯಾಸಗಳೂ ಬೆಳೆದ್ವು. ಕಳ್ಳತನಗಳೂ ಬೆಳೆದ್ವು. ಹದಿನಾರು ಮುಟ್ಟೋ ಹೊತ್ತಿಗೆ ಬೀಡಿ, ಸಿಗರೇಟು, ಸೇಂದಿ, ಸಾರಾಯಿ, ಇಸ್ಪೀಟು, ಜೂಜು ಎಲ್ಲೀವರ್ಗೂ ಅಂದ್ರೆ, ಹಾಸನದ ಅರಳೀಕಟ್ಟೆ ಶಾರದಮ್ಮನ ಮನೆಗೆ ಎಡತಾಕೋವರೆಗೂ ಬಂದಿತ್ತಂತೆ. ಅಜ್ಜ ದೇವಸ್ಥಾನದ ಗರ್ಭಗುಡೀಲಿ ಮಡೀಲಿ ಭಕ್ತಿಯಿಂದ ಪೂಜೆಗೆ ನಿಂತಿದ್ರೆ , ದೊಡ್ಡಪ್ಪ ಗೋಪುರ ಹತ್ತಿ ಹಿಂಭಾಗದ ನೆರಳಲ್ಲಿ ಸ್ನೇಹಿತರೊಟ್ಟಿಗೆ ಪಾನ ಪೇಯ, ಧೂಮಲೀಲೆಲಿ ಇಸ್ಪೀಟಿಗೆ ತೊಡಗೋರಂತೆ. ಪುಂಡಾಟಿಕೆ ಊರ ಜನಕ್ಕೆ ಸಾಕಾಗಿ ಹೋಗಿತ್ತು. ಅಜ್ಜನ ಮೇಲಿನ ಮರ್ಯಾದೆಗೆ ಎಲ್ಲಾ ಸುಮ್ಮನಿದ್ರು.

ಅದೇನೋ ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದ ಹಾಗೇ ದೊಡ್ಡಪ್ಪ ಕಾಣೆಯಾದ್ರಂತೆ. ಇದರ ಬಗ್ಗೆ ಯಾರೂ ಗಮನ ಹರಿಸ್ತಾನೂ ಇರಲಿಲ್ಲ. ತಲೆ ಕೆಡಿಸ್ಕೋತಾನೂ ಇರಲಿಲ್ಲ. ಆದರೇ ಅವರೊಟ್ಟಿಗೆ ಮನೇಲಿದ್ದ ವರ್ಷದ ಶಾನುಭೋಗಿಕೆ ಹಣ, ಅಜ್ಜಿ ಮತ್ತಿತರ ಎಲ್ಲ ಹೆಂಗಸರ ಒಡವೆ, ದೇವಸ್ಥಾನದ ಎಲ್ಲಾ ಚಿನ್ನಾಭರಣ, ಕೊನೆಗೆಲ್ಲೀವರೆಗೂ ಅಂದ್ರೆ ಆಂಜನೇಯ ದೇವಸ್ಥಾನದ ಗರ್ಭಗುಡಿಯ ಆಂಜನೇಯನ ಮೂರ್ತಿನೂ ಕಾಣೆಯಾಗಿತ್ತಂತೆ. ಊರಜನ ಸೇರಿದ್ರು ಗದ್ದಲವಾಯ್ತು. ಎಲ್ಲ ಜಗಳಕ್ಕೆ ನಿಂತ್ರು. ಪೋಲೀಸಿನವರಿಗೂ ಕೇಸು ಹೋಯ್ತು. ದೊಡ್ಡಪ್ಪ ಸಿಗಲಿಲ್ಲ. ಅಜ್ಜ ಕಾಶೀಗೆಂತ ಹೋದವನು ಮತ್ತೆ ಬರಲೇ ಇಲ್ಲ. ಮನೆ ಹಿರೀ ಮಗನಿಗೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿತ್ತು. ಊರ ಜನ, ಪೋಲೀಸಿನವರ ಕಾಟ ತಡೀಲಾರದೇ, ಎಲ್ಲ ರಾತೋರಾತ್ರಿ ಊರು ಬಿಟ್ಟರು. ಬೆಂಗಳೂರು ಸೇರಿದ್ರು. ಊರು ಕಾಯುವ ಆಂಜನೇಯನಿಗೆ ದೊಡ್ಡಪ್ಪ ಮುಕ್ತಿ ಕೊಟ್ಟಿದ್ದ. ರಕ್ತ ಹಂಚಿಕೊಂಡು ಹುಟ್ಟಿದವರು ಊರು ಬಿಟ್ಟು ಅದರ ಉಸಾಬರಿಯಿಂದ ಮುಕ್ತಿ ತಗೊಂಡ್ರು.

***

ಪುರೋಹಿತರು ಬಂದಿದ್ದರು. ಕಾರ್ಯಕ್ರಮಗಳು ಶುರುವಾದವು. ಸ್ನಾನಕ್ಕೆ ಹೋಗಕ್ಕೆ ಮೊದಲು ದೊಡ್ಡಪ್ಪನ ಮಗ ಹತ್ತಿರ ಬಂದು ಅಂದ.

'ಲೋಫರೋ ನನ್ನಪ್ಪ. ವಿಲ್ಲ್ ಬರೆದಿದ್ದಾನೆ. ಎಂಟಾಣೆ ಆಸ್ತಿ ನನ್ನ ಹೆಸರಿಗಿಲ್ಲ. ಎಲ್ಲ ಹೆಣ್ಣು ಮಕ್ಕಳಿಗೆ ಹಂಚಿ ಮಿಕ್ಕಿದ್ದನ್ನ ನನ್ನ ಮಗನಿಗೆ ಬರೆದಿದ್ದಾನೆ. ಇಷ್ಟುದಿನ ಅಪ್ಪನ ಕೈಗೆ ಕಾದಿದ್ದಾಯ್ತು ಸತ್ತ. ಆಸ್ತಿ ಬರತ್ತೇ ಅಂದ್ಕೊಂಡ್ರೆ ಮಗನ ಕೈಗೆ ಹೋಗತ್ತೆ. ಇನ್ನು ಅವನ ಎದುರು ಕೈ ಚಾಚಬೇಕು.'

'ಮತ್ತೆ ಈ ಮನೆ'

ಮನೆ ಬಗ್ಗೆ ಕೇಳ್ದೆ. ಬಸವನಗುಡಿ ರಂಗರಾವ್ ರಸ್ತೆಲಿ ನೂರಿಪ್ಪತ್ತು, ನೂರೆಂಬತ್ತು ಇತ್ತು. ಅವನಂದ.

'ಅದೊಂದು ನನಗಂತೆ. ಅದೂ ಏನು? ನನ್ನಮ್ಮ ಇರೋವರ್ಗೂ ಅವಳು ಅನುಭವಿಸ್ತಾಳಂತೆ. ನಂತರ ನಾನು ಅನುಭವಿಸಬೇಕಂತೆ. ಆಮೇಲೆ ಮಗನಿಗೆ ಹೋಗತ್ತಂತೆ'

ಸುಮ್ಮನಿದ್ದೆ.

'ದಕ್ಕ ಬೇಕೂಂದ್ರೆ ಅಮ್ಮ ಸಾಯಬೇಕು. ಅದು ಸಾಲದು! ನನ್ನ ಮಗಾನೂ...'

ಮುಂದಿಂದು ನಾನು ಕೇಳಿಸ್ಕೊಳ್ಳಿಲ್ಲ' ಪುರೋಹಿತರು ಬೇಗ ಬೇಗ ಅಂದ್ರು. ಇವನು ಅಪ್ಪನ್ನ ಲೋಫರ್ ಅಂತ ಕರ್ದೋನು, ಮಡಿಯಾಗೋಕೆ ಸ್ನಾನಕ್ಕೆ ಹೋದ.

***